**IN THE COURT OF Addl. Civil Judge & J.M.F.C (2ND COURT) KARWAR.**

Civil Mis. 8/2019 R.W: 1

Witness name : Shri Balakrishna

Father's Name : Tukoba Naik

Age : 65 years

Occupation : Rtd. Govt. Servant

Resident : Keshavnaikwada, Kodibag, Karwar

Duly sworn on : 21-12-2023

**Examination in chief by: Sri. CDN Advocate:-.**

1. I have filed affidavit in lieu of examination in chief, the contents of the said affidavit are true and correct. I have instructed in person to my Advocate in preparing the same.

**No representation on behalf of the petitioner. Hence, cross examination of RW.1 is deferred.**

( Dictated in open court and typed as per the dictation)

R.O.A.C.

**Addl. Civil Judge, Kawar.**

**ಸಾಕ್ಷಿಯನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 13.02.2024.**

**ಪಾಟೀ ಸವಾಲುಃ ಶ್ರೀ ಎಸ್ ಎಸ್ ಎಚ್ ವಕೀಲರಿಂದಃ**

2. ಪಾಂಡುರಂಗ ಮತ್ತು ಮಹಾದೇವ ಇವರಿಬ್ಬರೂ ನನ್ನ ಸಹೋದರರು. ಸದರಿಯವರಿಬ್ಬರೂ ನನ್ನ ವಿರುದ್ಧ ನ್ಯಾಯಾಲಯದಲ್ಲಿ ವಾಂಟಣೆ ಸಲುವಾಗಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು 5 ನೇ ಪ್ರತಿವಾದಿಯನ್ನಾಗಿ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ವಕೀಲರ ಮುಖಾಂತರ ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ಡಿಕ್ರಿ ಆದ ಕಾಲಕ್ಕೆ ನಾನು ನ್ಯಾಷನಲ್ ಇನ್ಸುರೆನ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೇ ನಂ.130/2 ರಲ್ಲಿ ಯಾರಿಗೆ ಎಷ್ಟು ಹಕ್ಕು ಇದೆ ಎನ್ನುವುದನ್ನು ಘೋಷಿಸಲಾಯಿತು ಎಂದರೆ ಸರಿ. ಸದರಿ ಜಾಗದ 9 ಗುಂಟೆ 8 ಆಣೆಯಲ್ಲಿ ಯಾರಿಗೆ ಯಾವ ಕಡೆಗೆ ಜಾಗ ಬರುತ್ತದೆ ಎನ್ನುವುದು ಹಿಸ್ಸೆ ಆಗಿರುವುದಿಲ್ಲಾ ಎಂದರೆ ಸರಿ. ನಾನು 2019 ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತೇನೆ. 2019 ನೇ ಇಸವಿಯಲ್ಲಿ ನಮ್ಮ ನಡುವೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಸರಸ ನಿರಸದಂತೆ ಭಾಗ ಆಗದೇ ಇದ್ದುದರ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿ. ದಾವೆಯಲ್ಲಾದ ಡಿಕ್ರಿಯ ಆಧಾರದ ಮೇಲೆ ನಾನು ನ್ಯಾಯಾಲಯದಲ್ಲಿ ಎಫ್ ಡಿ ಪಿ ಆರ್ಜಿಯನು ಸಲ್ಲಿಸಿರುವುದಿಲ್ಲಾ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ ನಮ್ಮ ತಾಯಿಯವರ ಹೆಸರು ಇರುವುದರ ಬಗ್ಗೆ ನನಗೆ ತಿಳಿದಿದೆ. ಸಂಪೂರ್ಣ 9 ಗುಂಟೆ 8 ಆಣೆ ಕ್ಷೇತ್ರ ನನ್ನ ತಾಯಿಯ ಹೆಸರಿನಲ್ಲಿ ಇತ್ತು. ನಮ್ಮ ತಾಯಿಯವರು 2018 ರ ಮೊದಲೇ ತೀರಿಹೋಗಿರುತ್ತಾರೆ ಎಂದರೆ ಸರಿ. 2019 ನೇ ಇಸವಿಯಲ್ಲಿ ನಮ್ಮ ತಾಯಿಯವರು ಜೀವಂತ ಇಲ್ಲಾ ಎಂದರೆ ಸರಿ. ನಮ್ಮ ತಾಯಿಯವರು ತೀರಿಹೋದ ನಂತರ ಪಹಣಿ ಪತ್ರಿಕೆಯಲ್ಲಿ ವಾರಸುದಾರರ ಹೆಸರನ್ನು ನಮೂದಿಸಲು ಅರ್ಜಿಯನ್ನು ನೀಡಿರುವುದಿಲ್ಲಾ ಎಂದರೆ ಸರಿ. ಸರ್ವೇ ನಂ.130/2 ರಲ್ಲಿ ಸರಸ ನಿರಸ ವಾಂಟಣೆ ಆಗಿದೇ ಇದ್ದರೂ ಸಹ 2019 ನೇ ಇಸವಿಯಲ್ಲಿ ಸದರಿ ಸರ್ವೇ ನಂಬರನಲ್ಲಿ ರಸ್ತೆಗೆ ತಾಗಿ ನಾನು ಮನೆಯನ್ನು ನಿರ್ಮಿಸಲು ಪ್ರಾರಂಭಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ನಿವೃತ್ತಿ

ಹೊಂದಿದ ನಂತರ ಉಳಿಯಲು ಮನೆ ಇಲ್ಲದೇ ಇದ್ದ ಕಾರಣ ಮತ್ತು ಬಾಡಿಗೆ ಹಣವನ್ನು ಭರಿಸಲು ಆಗುವುದಿಲ್ಲಾ ಎಂಬ ಕಾರಣಕ್ಕಾಗಿ ನಾನು ಮನೆ ನಿರ್ಮಾಣ ಕೈಗೊಂಡಿದ್ದೇನೆ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಅರ್ಜಿದಾರನ ಮಗ ಮನೆಕಟ್ಟಿಕೊಂಡು ವಾಸವಾಗಿದ್ದಾನೆ ಎಂದರೆ ಸರಿ. ಸರ್ವೇ ನಂ.130/1 ಕ್ಷೇತ್ರ 1 ಗುಂಟೆ 8 ಆಣೆ ಇದರಲ್ಲಿ ಅರ್ಜಿದಾರನ ಮಕ್ಕಳು ಮನೆ ಕಟ್ಟಿಕೊಂಡಿದ್ದು, ಸದರಿ ಜಮೀನು ಅರ್ಜಿದಾರ ಮಹಾದೇವ ತುಕೋಬಾ ನಾಯ್ಕ ಇವರಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ನಮ್ಮ ಮನೆಯ ಹಿಂದೆ ಇರುವ ಹಳೆಯ ಮನೆಯಲ್ಲಿ ನನ್ನ ತಂಗಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಮನೆ ಕಟ್ಟುವ ಕಾಲಕ್ಕೆ ಅರ್ಜಿದಾರ ಡಿಕ್ರಿಯ ಪ್ರಕಾರ ವಾಂಟಣಿ ಮಾಡಿಕೊಂಡು ಮನೆಯನ್ನು ಕಟ್ಟು ಎಂದು ನನಗೆ ಹೇಳಿರುತ್ತಾನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

( Dictated in open court and typed as per the dictation)

R.O.A.C.

**Addl. Civil Judge, Kawar.**